# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** **ಶ್ರೀ ಮಂಜುನಾಥ ಪ್ರಸಾದ, ಅಭಿವೃದ್ಧಿ ಅಧಿಕಾರಿ ಹಾಗೂ ಶ್ರೀ ಕಸ್ತೂರಿ ನರಸಿಂಹ ನಾಯ್ಡು, ಕಾರ್ಯದರ್ಶಿ, ಸೋಮಯೋಜಲ ಹಳ್ಳಿ ಗ್ರಾಮ ಪಂಚಾಯತಿ, ಕೋಲಾರ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.**

**ಓದಲಾಗಿದೆ:** 1) ನಿಬಂಧಕರು, ಕನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ: ಕಂಪ್ಲೇಟ್/ಉಪಲೋಕ/ಬಿಡಿ/1823/2014/ಸನಿಕಾಸ-1, ದಿ:17-02-2017.

2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ:ಕಂಪ್ಲೇಟ್/ಉಪಲೋಕ/ಬಿಡಿ/1823/2014/ಸನಿಕಾಸ-1, ದಿನಾಂಕ:24-01-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 24-01-2017 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ದೂರುದಾರರಾದ ಶ್ರೀ ಸೀನಪ್ಪ ಬಿನ್ ಮುನಿಶಾಮಿ (ಪಿಳ್ಳಣ್ಣ) ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕು ರೋಣೂರು ಹೋಬಳಿ ಸೋಮಯಾಜಲಹಳ್ಳಿ ಅಂಚೆ ಓಜಲಹಳ್ಳಿ ಗ್ರಾಮ ಇವರು ದಿನಾಂಕ:18-08-2016 ರಂದು 1)ಶ್ರೀ ಪ್ರಕಾಶ್, ಹಿಂದಿನ ಕಾರ್ಯನಿರ್ವಹಣಾ ಅಧಿಕಾರಿಗಳು 2)ಶ್ರೀ ಆಂಜನೇಯ ರೆಡ್ಡಿ (ಪ್ರಸ್ತುತ ನಿವೃತ್ತ) ಹಿಂದಿನ ಕಿರಿಯ ಅಭಿಯಂತರರು 3)ಶ್ರೀ ಅನ್ವರ್ ಪಾಷ, ಹಿಂದಿನ ಕಿರಿಯ ಅಭಿಯಂತರರು, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತ್ 4)ಶ್ರೀ ಮಂಜುನಾಥ ಪ್ರಸಾದ, ಅಭಿವೃದ್ಧಿ ಅಧಿಕಾರಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತ್ 5)ಶ್ರೀ ಕಸ್ತೂರಿ ನರಸಿಂಹ ನಾಯ್ಡು ಕಾರ್ಯದರ್ಶಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತ್ ಮತ್ತು 6)ಜಿಲ್ಲಾ ಪಂಚಾಯತ್ ಓಂಬಡ್ಸ್‌ಮನ್ ಇವರುಗಳ ವಿರುದ್ಧ ಕರ್ತವ್ಯಲೋಪವೆಸಗಿರುವ ವಿಷಯಕ್ಕೆ ಸಂಬಂಧಿಸಿದಂತೆ ದೂರನ್ನು ಸಲ್ಲಿಸಿದ್ದು, ಅದಕ್ಕೆ ಸಂಬಂಧಿಸಿದ ಎದುರುದಾರರ ವಿವರಗಳನ್ನು ಕ್ರಮವಾಗಿ ಈ ಕೆಳಕಂಡಂತೆ ತೋರಿಸಲಾಗಿದೆ.

| ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|
| 1) ಶ್ರೀ ಪ್ರಕಾಶ್, ಹಿಂದಿನ ಕಾರ್ಯನಿರ್ವಹಣಾ ಅಧಿಕಾರಿಗಳು, ಶ್ರೀನಿವಾಸಪುರ ತಾಲ್ಲೂಕು ಪಂಚಾಯತಿ, ಕೋಲಾರ ಜಿಲ್ಲೆ. | **1** |
| 2) ಶ್ರೀ ಆಂಜನೇಯ ರೆಡ್ಡಿ (ಪ್ರಸ್ತುತ ನಿವೃತ್ತ) ಹಿಂದಿನ ಕಿರಿಯ ಅಭಿಯಂತರರು, ಕೋಲಾರ ಜಿಲ್ಲೆ. | **2** |
| 3) ಶ್ರೀ ಅನ್ವರ್ ಪಾಷ, ಹಿಂದಿನ ಕಿರಿಯ ಅಭಿಯಂತರರು, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತ್, ಕೋಲಾರ ಜಿಲ್ಲೆ. | **3** |
| 4) ಶ್ರೀ ಮಂಜುನಾಥ ಪ್ರಸಾದ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೋಲಾರ ಜಿಲ್ಲೆ | **4** |
| 5) ಶ್ರೀ ಕಸ್ತೂರಿ ನರಸಿಂಹ ನಾಯ್ಡು, ಕಾರ್ಯದರ್ಶಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತ್, ಕೋಲಾರ ಜಿಲ್ಲೆ. | **5** |
| 6) ಜಿಲ್ಲಾ ಪಂಚಾಯತ್ ಓಂಬಡ್ಸ್‌ಮನ್, ಕೋಲಾರ ಜಿಲ್ಲೆ. | **6** |

**ದೂರಿನ ಸಂಕ್ಷಿಪ್ತ ವಿವರಣೆ:**

ಸದರಿ ಪ್ರಕರಣದಲ್ಲಿ ಮಾನ್ಯ ಉಪ ಲೋಕಾಯುಕ್ತ-2 ರವರು ಲೋಕಾಯುಕ್ತ ಕಾಯ್ದೆ ಕಲಂ 12(3) ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಸದರಿ ದೂರುದಾರರು ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕು ಸೋಮಯಾಜಲಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2008-2009ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಓಜಲಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಿಂದ ಕುಳ್ಳಗುರ್ಕಿ ರಸ್ತೆಯಿಂದ ಮುಖ್ಯ ರಸ್ತೆಯವರೆಗೆ ಮತ್ತು ಸೋಮಯಾಜಲಹಳ್ಳಿ ಮಂಡಲ್ ಚನ್ನೇಗಾರಿಪಲ್ಲಿ ರಸ್ತೆಯಿಂದಕೊಂಡನಹಳ್ಳಿ

ಕೆರೆಯ ಮೂಲಕ ರಂಗನಾಥಪುರಕ್ಕೆ ರಸ್ತೆ ಕಾಮಗಾರಿ ಹಾಗೂ 2012-13 ನೇ ಸಾಲಿನಲ್ಲಿ ಪುಂಗನೂರು ರಸ್ತೆಯಿಂದ ಕುಳ್ಳಗುರ್ಕಿ ಗ್ರಾಮ ರಸ್ತೆಗೆ ಸಂಪರ್ಕ ರಸ್ತೆ ಮತ್ತು ಕಾಲುವೆಗೆ ಅಂದಾಜು ರೂ.2.00ಲಕ್ಷ ಹಾಗೂ ಕಸ್ತೂರಿಬಾ ಶಾಲೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯಿಂದ ಕೊಂಡರಾಜ ಕೆರೆಗೆ ಕಾಲುವೆ ಅಭಿವೃದ್ಧಿಗೆ ರೂ.1,50,000/- ಮತ್ತು ಸೋಮಯಾಜಲಹಳ್ಳಿ, ಚೆನ್ನಯ್ಯಗಾರ ಹಳ್ಳಿಯಿಂದ ರಘುನಾಥಪುರಕ್ಕೆ ರಸ್ತೆ ಅಭಿವೃದ್ಧಿಗೆ ರೂ.2.00ಲಕ್ಷಕ್ಕೆ ಆಗಿದ್ದು, ಸದರಿ ಕಾಮಗಾರಿಗಳಿಗೆ ಪಂಚಾಯತ್ ನಮೂನೆ – 6 ರಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅನುಮತಿ ನೀಡಿದ್ದು, ಕಾಮಗಾರಿಗಳ ಫೋಟೋಗಳನ್ನು ಒದಗಿಸಿದ್ದು, ಸದರಿ ಕಾಮಗಾರಿಯ ಬಿಲ್ ಮಾಡಿಕೊಡದೇ ಎದುರುದಾರರು ತೊಂದರೆ ನೀಡಿರುತ್ತಾರೆ. ಈ ಬಗ್ಗೆ ಜಿಲ್ಲಾ ಪಂಚಾಯತ್, ಕೋಲಾರದ ಓಂಬಡ್ಸ್‌ಮನ್‌ರವರಿಗೂ ಸಹ ದೂರು ಸಲ್ಲಿಸಿದ್ದರೂ ಸಹ ತಮಗೆ ಪರಿಹಾರ ದೊರೆತಿಲ್ಲವೆಂದು ವರದಿಸಿರುತ್ತಾರೆ.

ಸದರಿ ದೂರಿಗೆ 1ನೇ ಎದುರುದಾರರಾದ ಶ್ರೀ ಪ್ರಕಾಶ್, ಹಿಂದಿನ ಕಾರ್ಯನಿರ್ವಹಣಾ ಅಧಿಕಾರಿಗಳು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 2ನೇ ಎದುರುದಾರರಾದ ಶ್ರೀ ಆಂಜನೇಯ ರೆಡ್ಡಿ (ಪ್ರಸ್ತುತ ನಿವೃತ್ತ) ಹಿಂದಿನ ಕಿರಿಯ ಅಭಿಯಂತರರು, ತಮ್ಮ ಆಕ್ಷೇಪಣೆಯಲ್ಲಿ ತಮಗೆ ಒಟ್ಟು 8 ಪಂಚಾಯತಿಗಳನ್ನು ವಹಿಸಿದ್ದು, ಕೆಲಸದ ಒತ್ತಡದ ಮಧ್ಯೆ ದೂರುದಾರರ ದೂರಿಗೆ ಸಂಬಂಧಿಸಿದಂತೆ, ಚೆಕ್‌ಗಳನ್ನು ಹಿಂದಿನ ಪಿಡಿಓ ರವರು ವಿತರಿಸಿರುವ ಬಗ್ಗೆ ಕಂಡು ಬಂದಿದ್ದು, ಸದರಿ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿ ಗಳಿಗೆ ತಾವು ಸಹಿ ಮಾಡಿರುವುದಿಲ್ಲ ಹಾಗೂ ಈ ಬಗ್ಗೆ ಓಂಬಡ್ಸ್‌ಮನ್ ಜಿಲ್ಲಾ ಪಂಚಾಯತ್ ಕೋಲಾರ ರವರು ಮಾಡಿರುವ ಆದೇಶ ತಮಗೆ ಅನ್ವಯಿಸುವುದಿಲ್ಲವೆಂದು ವರದಿಸಿರುತ್ತಾರೆ.

3ನೇ ಎದುರುದಾರರಾದ ಶ್ರೀ ಅನ್ವರ್ ಪಾಷ, ಹಿಂದಿನ ಕಿರಿಯ ಅಭಿಯಂತರರು ತಮ್ಮ ಆಕ್ಷೇಪಣೆಯಲ್ಲಿ 2012-13ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆಯ ಅಂದಾಜು ಪಟ್ಟಿಯನ್ನು ತಯಾರಿಸಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸಲ್ಲಿಸಿರುವುದಾಗಿ ವರದಿಸಿರುತ್ತಾರೆ.

4ನೇ ಎದುರುದಾರರಾದ ಶ್ರೀ ಮಂಜುನಾಥ ಪ್ರಸಾದ ಅಭಿವೃದ್ಧಿ ಅಧಿಕಾರಿ ಯವರು ತಮ್ಮ ಆಕ್ಷೇಪಣೆಯಲ್ಲಿ, ಲಕ್ಷ್ಮೀಪುರ ಗ್ರಾಮ ಪಂಚಾಯತ್, ಶ್ರೀನಿವಾಸಪುರದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದು, ಸದರಿ ಗ್ರಾಮ ಪಂಚಾಯತ್ ಕಾರ್ಯನಿರ್ವಹಣಾ ಅಧಿಕಾರಿಯವರ ಆದೇಶದಂತೆ ನಿಯೋಜನೆಗೊಂಡಿದ್ದು, ಸೋಮಯಾಜಲ ಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಎಲ್ಲಾ ಕಾಮಗಾರಿಗೂ ಸಂಬಂಧಿಸಿದ ಬಿಲ್ಲುಗಳನ್ನು ದೂರುದಾರರಿಗೆ ಮಂಜೂರು ಮಾಡಲಾಗಿದೆ. ಓಂಬಡ್ಸ್‌ಮನ್ ರವರು 2010-11ನೇ ಸಾಲಿನಲ್ಲಿ ನಿರ್ವಹಿಸಲಾದ ಸೋಮಯಾಜಲಹಳ್ಳಿ ಗ್ರಾಮದ ಕೊಂಡರಾಜನ ಹಳ್ಳಿ ಕೆರೆ ಕೋಡಿಯಿಂದ ರಘುನಾಥಪುರಕ್ಕೆ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ, ಬಿಲ್ ಪಾವತಿಯಾಗಿರುವ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಸದರಿ ಆದೇಶದಲ್ಲಿ ತನ್ನಿಂದ ಕರ್ತವ್ಯಲೋಪವಾಗದೇ ಇದ್ದರೂ ಸಹ ರೂ.11,500/- ದಂಡ ವಿಧಿಸಿದ್ದಾರೆ. ದೂರುದಾರರಿಗೆ ಸಂಬಂಧಿಸಿದ ಎಲ್ಲಾ ಬಿಲ್ಲುಗಳನ್ನು ಪಾವತಿಸಿರುವುದಾಗಿ ವರದಿಸಿರುತ್ತಾರೆ.

5ನೇ ಎದುರುದಾರರಾದ ಶ್ರೀ ಕಸ್ತೂರಿ ನರಸಿಂಹ ನಾಯ್ಡು, ಕಾರ್ಯದರ್ಶಿ, ತಮ್ಮ ಆಕ್ಷೇಪಣೆಯಲ್ಲಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನಿಯಮಾನುಸಾರ ಎಲ್ಲಾ ಬಿಲ್ಲುಗಳನ್ನು ಪಾವತಿ ಮಾಡಿದ್ದು, ಸದರಿ ಕಾಮಗಾರಿಗಳ ಬಗ್ಗೆ ಓಂಬಡ್ಸ್‌ಮನ್ ಜಿಲ್ಲಾ ಪಂಚಾಯತ್ ಕೋಲಾರ ರವರು ವಿಚಾರಣೆ ನಡೆಸಿ ಸಮಗ್ರ ವರದಿಯ ಬಗ್ಗೆ ಚರ್ಚಿಸಿ ಆದೇಶಿಸಿರುವುದಾಗಿ ವರದಿಸಿರುತ್ತಾರೆ.

6ನೇ ಎದುರುದಾರರಾದ ಜಿಲ್ಲಾ ಪಂಚಾಯತ್ ಓಂಬಡ್ಸ್‌ಮನ್‌ರವರು ತಮ್ಮ ಆಕ್ಷೇಪಣೆಯಲ್ಲಿ, ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ರಸ್ತೆ ಕೆಲಸ ಮಾಡಿದ್ದು, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಬಿಲ್ ಕೊಡದೇ ಮೋಸ ಮಾಡಿರುವ ಬಗ್ಗೆ ದೂರು ನೀಡಿರುವ ಸಂಬಂಧ ಕಾಮಗಾರಿಗಳನ್ನು ನಿರ್ವಹಿಸಿದ ಕಡತಗಳ ತಪಾಸಣೆ, ಕಾಮಗಾರಿಗಳ ವೀಕ್ಷಣೆ, ಅಧಿಕಾರಿಗಳ ಮತ್ತು ಚುನಾಯಿತ ಪ್ರತಿನಿಧಿಗಳ ಹಾಗೂ ಗ್ರಾಮಸ್ಥರ ಹೇಳಿಕೆಯನ್ನು ಪಡೆದು ಈ ಎಲ್ಲಾ ಆಧಾರದ ಮೇಲೆ ದಿ: 24-03-2014 ರಲ್ಲಿ ಆದೇಶ ಮಾಡಲಾಗಿದ್ದು, 5 ಜನ ತಪ್ಪಿತಸ್ಥರಿಗೆ ದಂಡದ ರೂಪದಲ್ಲಿ ರೂ.5,000/-ಗಳನ್ನು ವಿಧಿಸಲಾಗಿದ್ದು, ಕಾಮಗಾರಿಗೆ ಶೇ.10% ರಂತೆ ರೂ.55,000/- ಗಳನ್ನು 5 ಜನ ತಪ್ಪಿತಸ್ಥರಿಂದ ಸಮನಾಗಿ ವಸೂಲಿ ಮಾಡಿ ದೂರುದಾರರಿಗೆ ಪಾವತಿಸಬೇಕೆಂದು ಆದೇಶಿಸಿದೆ ಮತ್ತು ನಾಮಫಲಕದ ಕಾಮಗಾರಿಗೆ ಶೇ.50% ರಷ್ಟು ಅಂದರೆ ರೂ.21,500/-ಗಳಂತೆ ಒಟ್ಟು ರೂ.76,500/-ಗಳನ್ನು ದೂರುದಾರರಿಗೆ ಪಾವತಿಸಬೇಕೆಂದು ಆದೇಶಿಸಿರುವುದಾಗಿ ವರದಿಸಿರುತ್ತಾರೆ.

ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ ದೂರುದಾರರು ಒಟ್ಟು 3 ಕಾಮಗಾರಿಗಳನ್ನು ನಿರ್ವಹಿಸಿದ್ದರೂ ಸಹ 1 ರಿಂದ 5ನೇ ಎದುರುದಾರರು ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೂಲಿ ಹಣ ನೀಡದೇ ತೊಂದರೆ ಉಂಟು ಮಾಡಿರುವುದು ಕಂಡು ಬಂದಿದ್ದು, ಸದರಿ 1 ರಿಂದ 5ನೇ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಲು ಸಮಂಜಸ ಕಾರಣಗಳು ಇರುವುದಿಲ್ಲ ಎಂದು ವರದಿಸಿರುತ್ತಾರೆ.

6ನೇ ಎದುರುದಾರರಾದ ಜಿಲ್ಲಾ ಪಂಚಾಯತ್ ಓಂಬಡ್ಸ್‌ಮನ್ ರವರ ವಿರುದ್ಧ ಯಾವುದೇ ಕರ್ತವ್ಯ ಲೋಪ ಕಂಡು ಬರುವುದಿಲ್ಲವಾದ ಕಾರಣ ಸದರಿಯವರ ವಿರುದ್ಧದ ನಡವಳಿಯನ್ನು ಕೈಬಿಡುವಂತೆ ವರದಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಪ್ರಕರಣದಲ್ಲಿ 5 ಆಪಾದಿತ ಅಧಿಕಾರಿ/ನೌಕರರು ಭಾಗಿಯಾಗಿದ್ದು, ಎದುರುದಾರರಾದ 1, 3, 4 ಮತ್ತು 5 ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957ರ ನಿಯಮ 14(ಎ) ರನ್ವಯ ಹಾಗೂ 2ನೇ ಎದುರುದಾರರಾದ ಶ್ರೀ ಆಂಜನೇಯ ರೆಡ್ಡಿ (ಪ್ರಸ್ತುತ ನಿವೃತ್ತ) ಹಿಂದಿನ ಕಿರಿಯ ಅಭಿಯಂತರರು, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತಿ ಇವರು ದಿನಾಂಕ:30-06-2013 ರಂದು ನಿವೃತ್ತಿ ಹೊಂದಿರುವುದರಿಂದ, ಕೆ.ಸಿ.ಎಸ್.ಆರ್. ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪ ಲೋಕಾಯುಕ್ತ-2 ರವರಿಗೆ ವಹಿಸುವಂತೆ ಕೋರಿರುತ್ತಾರೆ.

ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ, 1 ರಿಂದ 3ನೇ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ & ಸಿ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957ರ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿ ಆದೇಶಿಸಿರುತ್ತಾರೆ.

ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ, 4ನೇ ಎದುರುದಾರರಾದ ಶ್ರೀ ಮಂಜುನಾಥ ಪ್ರಸಾದ್, ಅಭಿವೃದ್ಧಿ ಅಧಿಕಾರಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತಿ ಕೋಲಾರ ಜಿಲ್ಲೆ ಹಾಗೂ 5ನೇ ಎದುರುದಾರರಾದ ಶ್ರೀ ಕಸ್ತೂರಿ ನರಸಿಂಹ ನಾಯ್ಡು, ಕಾರ್ಯದರ್ಶಿ, ಕೋಲಾರ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/359/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 22-07-2017.</u>**

ಶ್ರೀ ಮಂಜುನಾಥ ಪ್ರಸಾದ್, ಅಭಿವೃದ್ಧಿ ಅಧಿಕಾರಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಹಾಗೂ ಶ್ರೀ ಕಸ್ತೂರಿ ನರಸಿಂಹ ನಾಯ್ಡು, ಕಾರ್ಯದರ್ಶಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ಮಾನ್ಯ ಉಪಲೋಕಾಯುಕ್ತರು-2 ರವರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 267 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಶ್ರೀನಿವಾಸಪುರ, ತುಮಕೂರು ಜಿಲ್ಲೆ.
6) ಶ್ರೀ ಮಂಜುನಾಥ ಪ್ರಸಾದ್, ಅಭಿವೃದ್ಧಿ ಅಧಿಕಾರಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.
7) ಶ್ರೀ ಕಸ್ತೂರಿ ನರಸಿಂಹ ನಾಯ್ಡು, ಕಾರ್ಯದರ್ಶಿ, ಸೋಮಯಾಜಲಹಳ್ಳಿ ಗ್ರಾಮ ಪಂಚಾಯತಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.
8) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.